ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ವಸತಿನಿಲಯ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-256625 Email: jsscwk@gmail.com www.jsscwkgl.org

ದಿನಾಂಕ:10.3.2025 ಒಬ್ಬ ವ್ಯಕ್ತಿಯ ಜೀವನದಲ್ಲಿ ಮಹಿಳೆಯ ಪಾತ್ರ ತುಂಬಾ ದೊಡ್ಡದಿರುತ್ತದೆ. ಆಕೆ ತಾಯಿಯಾಗಿ, ಸೋದರಿಯಾಗಿ, ಪತ್ನಿಯಾಗಿ ಬಾಳಿಗೆ ಬೆಳಕಾಗುತ್ತಾಳೆ. ವೈಯಕ್ತಿಕವಾಗಿ ಮನೆಯ ಅರ್ಧ ಜವಾಬ್ದಾರಿಯನ್ನು ಹೊರುವ ಜೊತಗೆ ಒಬ್ಬ ಶಿಕ್ಷಕಿಯಾಗಿ, ಇಂಜಿನಿಯರ್ ಆಗಿ, ಪೈಲೆಟ್ ಆಗಿ ಕೂಡ ತನ್ನ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾಳೆ. ಸಮಾಜದ ಕಟ್ಟುಪಾಡುಗಳ ಹೊರತಾಗಿಯೂ ಕೂಡ ಈಗಿನ ಆಧುನಿಕ ದಿನಗಳಲ್ಲಿ ಆಕೆ ಸಾಧನೆಯ ಶಿಖರವನ್ನು ಮುಟ್ಟುತ್ತಿದ್ದಾಳೆ. ಹಾಗಾಗಿ ವಿಶ್ವದಾದ್ಯಂತ ಮಹಿಳೆಯರಿಗಾಗಿ ಗೌರವಾನ್ವಿತವಾಗಿ ಈ ಒಂದು ದಿನವನ್ನು **"ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ"** ಯನ್ನಾಗಿ ಆಚರಿಸುವ ಮೂಲಕ ಮೀಸಲಿಡಲಾಗಿದೆ ಎಂದು ದಿನಾಂಕ 8.3.2025ರಂದು ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಕು. ಎಂ. ಶಿಲ್ಪಶ್ರೀ, ವಕೀಲರು, ಉಚ್ಚನ್ಯಾಯಾಲಯ ಮತ್ತು ಕೆಳಹಂತದ ನ್ಯಾಯಾಲಯ, ಬೆಂಗಳೂರು ರವರು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿನಿಯರಾದ ಶ್ರೀಮತಿ ಎಲ್ ದೀಪ, ಸಬ್ ಪೋಸ್ಟ್ ಮಾಸ್ಟರ್, ಕೊಳ್ಳೇಗಾಲ ಹಾಗೂ ಶ್ರೀಮತಿ ಎಂ ಪಲ್ಲವಿ, ವಾಣಿಜ್ಯಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಎಂ. ಸಂಗಶೆಟ್ಟಿ ಪದವಿ ಪೂರ್ವ ಕಾಲೇಜು, ಕುದೇರು ಇವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಡಾ. ಹೆಚ್ ಎಸ್ ಕೊಂಗಳಪ್ಪರವರು ಸಮಾನತೆಯ ಜೊತೆಗೆ ಒಗ್ಗಟ್ಟಿನಲ್ಲಿ ಸಹ ಮಹಿಳೆಯರು ಸದಾ ಮುಂದಿರುವುದು ದೇಶದ ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿನಿ ವೇದಿಕೆಯ ಸಂಚಾಲರಾದ ಶ್ರೀಮತಿ ವಾಣಿ ಎನ್, ರವರು ಉಪಸ್ಥಿತರಿದ್ದರು.

**“ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ”** ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಎಲ್ ದೀಪ, ಸಬ್ ಪೋಸ್ಟ್ ಮಾಸ್ಟರ್, ಕೊಳ್ಳೇಗಾಲ, ಕು. ಎಂ. ಶಿಲ್ಪಶ್ರೀ, ವಕೀಲರು, ಹನೂರು, ಪ್ರಾಚಾರ್ಯರಾದ ಡಾ. ಹೆಚ್ ಎಸ್ ಕೊಂಗಳಪ್ಪ, ಶ್ರೀಮತಿ, ಶ್ರೀಮತಿ ಎಂ ಪಲ್ಲವಿ ವಾಣಿಜ್ಯಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಎಂ. ಸಂಗಶೆಟ್ಟಿ ಪದವಿ ಪೂರ್ವ ಕಾಲೇಜು ಕುದೇರು & ಶ್ರೀಮತಿ ವಾಣಿ ಎನ್, ಸಂಚಾಲಕರು, ಹಿರಿಯ ವಿದ್ಯಾರ್ಥಿನಿ ವೇದಿಕೆ ಹಾಗು ಸಹಾಯಕ ಪ್ರಾಧ್ಯಾಪಕರು



ಹಿರಿಯ ವಿದ್ಯಾರ್ಥಿನಿಯರಾದ ಶ್ರೀಮತಿ ಎಲ್ ದೀಪ & ಶ್ರೀಮತಿ ಎಂ ಪಲ್ಲವಿ ರವರನ್ನು ಸನ್ಮಾನಿಸುತ್ತೀರುವುದು,



ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿನಿಯ ಹಾಗೂ ಉಪನ್ಯಾಸಕರು

